Reg. No. | | | | | | | | | |

# BASKAL 254/BSWKAL 254/BASKAL 281/BSWKAL 281/HRDKAL 281

**Credit Based/Choice Based Credit System IV Semester B.A./B.S.W./ B.A. (HRD) Degree Examination, September 2022**
**(2020 – 21 and Earlier Batches)**

**KANNADA/ಕನ್ನಡ**

**Kannada Language – IV/ಕನ್ನಡ ಭಾಷಾ ಪತ್ರಿಕೆ – IV**

Time : 3 Hours Max. Marks : 80

I. ಕೆಳಗಿನವುಗಳಲ್ಲಿ **ಮೂರು** ಪ್ರಶ್ನೆಗಳಿಗೆ ಉತ್ತರಿಸಿ : **(3×8=24)**

1) 'ಧರ್ಮ ವಿಜಯ' ಕವಿತೆಯಲ್ಲಿ ಭೀಮನ ಹುಮ್ಮಸ್ಸು ಕೌರವರಲ್ಲಿ ಅಸೂಯೆಯನ್ನು ಮೂಡಿಸಿದ ಬಗೆಯನ್ನು ವಿವರಿಸಿ.

**ಅಥವಾ**

ಇಳೆಯಾಂಡ ಗುಡಿಮಾರನನ್ನು ಶಿವ ಪರೀಕ್ಷಿಸಿದ ಬಗೆ ಹೇಗೆ ವಿವರಿಸಿರಿ.

2) ಹಿಮಾಲಯದ ಮಲಾನ ಹಳ್ಳಿಯ ಬಗ್ಗೆ ಲೇಖಕರಿಗಿದ್ದ ಅಭಿಪ್ರಾಯಗಳೇನು ?

**ಅಥವಾ**

ಮಾಯಾಮೃಗ ಕಥೆಯಲ್ಲಿ ಕಲ್ಪನೆ, ಭಯ, ಹಾಸ್ಯ ಹಾಗೂ ಜೀವನದ ಸತ್ಯತೆ ಹೇಗೆ ಅನಾವರಣಗೊಂಡಿದೆ ವಿವರಿಸಿ.

3) ರಾಮ ಸೀತೆಯನ್ನು ತನ್ನ ಮಡದಿಯೆಂದು ಸ್ವೀಕರಿಸುವಂತಾದ ಸಂದರ್ಭವನ್ನು ವಿವರಿಸಿ.

**ಅಥವಾ**

ಸೀತಾ ಪರಿತ್ಯಾಗದ ಸನ್ನಿವೇಶ ಜನಪದ ಮಹಾಕಾವ್ಯದಲ್ಲಿ ಹೇಗೆ ಹೊಸರೂಪ ಪಡೆದಿದೆ ? ವಿವರಿಸಿ.

II. ಕೆಳಗಿನವುಗಳಲ್ಲಿ **ಮೂರು** ಪ್ರಶ್ನೆಗಳಿಗೆ ಉತ್ತರಿಸಿರಿ : **(3×5=15)**

1) ಆಧುನಿಕ ವೈಜ್ಞಾನಿಕ ಕೃಷಿ ಪದ್ಧತಿಯ ದುಷ್ಪರಿಣಾಮಗಳು 'ಗದ್ದೆಯಲೊಂದು ಕಪ್ಪೆ' ಕವನದಲ್ಲಿ ನಿರೂಪಿತವಾದ ಬಗೆಯನ್ನು ವಿವರಿಸಿ.

**ಅಥವಾ**

ಬಿಡುಗಡೆಯ ಸುಖವನ್ನು ಅನುಭವಿಸಿಯೇ ತೀರುವೆನೆಂಬ ಹೆಣ್ಣಿನ ಅಚಲವಾದ ನಂಬಿಕೆ 'ಹೆಣ್ಣೆಂಬ ನದಿಯ ಕನಸು' ಕವನದಲ್ಲಿ ಹೇಗೆ ವ್ಯಕ್ತವಾಗಿದೆ ವಿವರಿಸಿ.

**P.T.O.**

2) ಪ್ರಾಣಿಗಳು, ಪಕ್ಷಿಗಳು ತಮ್ಮ ಸೀಮೆಯನ್ನು ಗುರುತಿಸುವ ವಿಧಾನವನ್ನು ಪರಿಚಯಿಸಿರಿ.

**ಅಥವಾ**

ಮಾಯಾಮೃಗ ಕಥೆಯಲ್ಲಿ ನಾಯಿ ಹೇಗೆ ಮನೆಯ ಮಾಲಿಕನ ಮೃತ್ಯುವಿಗೆ ಕಾರಣವಾಯಿತು ? ವಿವರಿಸಿ.

3) ಜನಪದ ಕಾವ್ಯದಲ್ಲಿ 'ಕುಶ್ಚಲು-ಅವುಲು' ಪ್ರಸಂಗದ ಸ್ವಾರಸ್ಯವನ್ನು ಬರೆಯಿರಿ.

**ಅಥವಾ**

ಹುಣಸೇ ಕಾಯಿ ವೃತ್ತಾಂತದಲ್ಲಿ ಮೂಡಿದ ಗ್ರಾಮೀಣ ಜೀವನದ ನೈಜ ಚಿತ್ರಣವನ್ನು ನಿರೂಪಿಸಿ.

III. **ಒಂದು** ಪದ್ಯ ಭಾಗದ ಸಂದರ್ಭ ಸೂಚಿಸಿ ಮಹತ್ವವನ್ನು ಬರೆಯಿರಿ : **(1×5=5)**

ಮನದ ಮೂಲೆಯಲ್ಲೊಂದು ಭರವಸೆ
ಕಾಲ ಹೀಗೆಯೇ ಇರದು
ನನ್ನ ರಭಸಕ್ಕೆ
ನಿರಂತರ ಘಾತಕ್ಕೆ
ಒಂದಲ್ಲ ಒಂದು ದಿನ ಒಡೆದೀತು ದಡ
ಬಂದೀತು
ಸಾಗರವಾಗುವ ಯೋಗ

**ಅಥವಾ**

ಎಲ್ಲ ತೇಜಂಗಳಂ ಶರಣತತಿಗೀವುತಂ
ಎಲ್ಲ ಮಾನ್ಯಂಗಳಂ ಭಕ್ತರ್ಗೆ ಸಾರ್ಚುತಂ
ಬಿಟ್ಟ ಬೆಸನಂ ಶಿವನ ಭಕ್ತರ್ಗೆ ಮಾಡುವಂ
ಕೊಟ್ಟು ತಣಿವಿಲ್ಲದನು ತಾಪದಿಂ ಬಾಡುವಂ
ಇಂತು ಜಂಗಮಕೆ ಮಾಳ್ಪುದು ಕರಂ ಪಿರಿದಾಗೆ
ಸಂತತಂ ಭಕ್ತ ಕುಲವರಿದು ಸಂತಸವಾಗೆ.

IV. ಈ ಕೆಳಗಿನ **ಎರಡು** ಪ್ರಶ್ನೆಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ಬರೆಯಿರಿ. **(2×4=8)**

1) ನೀರಿನೊಳು ಆಡುವವು ಮೂರು ಮೀನು.
2) ನಾಲಗೆಯ ಮೇಲೆಲ್ಲ ಇವನದೇ ಹೆಸರು.
3) ನತ್ತು ಮೂಗಿನ ಮೀನುಗಳಿಲ್ಲ ಪೈರು ತಳಕೆ.
4) ಬಿಳಿ ಅಂಗಿ ಬಿಳಿ ಲುಂಗಿ ಮುಂಡಾಸಿನ ಗಂಡಸರು.

V. ಅ) ಈ ಕೆಳಗಿನ **ಎರಡರ** ಕುರಿತು ಟಿಪ್ಪಣಿ ಬರೆಯಿರಿ. **(2×4=8)**

1) ಲಕ್ಷ್ಮೀಶ ಚೊಕ್ಕಾಡಿ

2) ಪೂರ್ಣಚಂದ್ರ ತೇಜಸ್ವಿ

3) ಹೆಣ್ಣು

4) ನಾಯಿಯ ನಿಯತ್ತು .

ಆ) ಈ ಕೆಳಗಿನ **ಎರಡರ** ಕುರಿತು ಟಿಪ್ಪಣಿ ಬರೆಯಿರಿ. **(2×4=8)**

1) ರಾಮ-ಲಕ್ಷ್ಮಣ

2) ಲವ-ಕುಶ

3) ಮಡಿವಾಳ ಮಾಚಪ್ಪ

4) ಮುತ್ತುಗದ ಎಲೆ.

VI. **ಎಲ್ಲಾ** ಪ್ರಶ್ನೆಗಳಿಗೂ **ಒಂದೊಂದು** ವಾಕ್ಯದಲ್ಲಿ ಉತ್ತರಿಸಿ : **(12×1=12)**

1) ಇಳೆಯಾಂಡ ಗುಡಿಮಾರರ ರಗಳೆಯನ್ನು ಯಾವ ಕೃತಿಯಿಂದ ಆಯ್ದುಕೊಳ್ಳಲಾಗಿದೆ ?

2) ಪುಕುವೋಕ ಯಾರು ?

3) ಗುಲಾಬಿ ಬಿಳಿಮಲೆಯವರ ಹುಟ್ಟೂರು ಯಾವುದು ?

4) 'ಮ್ಯೊಲಾಂಜಿ' ಕವನ ಸಂಕಲನವನ್ನು ಬರೆದವರು ಯಾರು ?

5) 'ಹೊನ್ನನ ನಾಯಿಗಳು' ಕಥೆಯನ್ನು ಬರೆದವರು ಯಾರು ?

6) ಕುವೆಂಪುರವರ ಕುರಿತು ತೇಜಸ್ವಿಯವರು ಬರೆದ ಕೃತಿ ಯಾವುದು ?

7) 'ಹಿಮಾಲಯದ ಒಂದು ವಿಚಿತ್ರ ಹಳ್ಳಿ' ಲೇಖನವನ್ನು ಬರೆದವರು ಯಾರು ?

8) ಎ.ಎನ್. ಮೂರ್ತಿರಾವ್‌ರವರ ಪೂರ್ಣ ಹೆಸರೇನು ?

9) ರಾಮ ಎಷ್ಟು ವರ್ಷಗಳ ವನವಾಸ ಜೀವನ ಮುಗಿಸುತ್ತಾನೆ ?

10) ಅಯೋಧ್ಯಾ ನಗರದ ಮಡಿವಾಳ ಯಾರು ?

11) ಸೀತೆಯನ್ನು ದಡಕ್ಕೆ ತಂದುಬಿಟ್ಟ ಮೀನುಗಳ ಹೆಸರೇನು ?

12) 'ಅಳ್ಳದ ಕಾಯಿ' ಪದದ ಅರ್ಥ ಏನು ?